ಸೆಲೆಬ್ರಿಟಿ

■ ಹನಿ

## ಬೇಡದ ಪ್ರಶಸ್ತಿ



'ದಕ್ಷಿಣದ ಕೋಗಿಲೆ' ಎಸ್.ಜಾನಕಿ ಮತ್ತೆ ಸುದ್ದಿಯಲ್ಲಿದ್ದಾರೆ. ಕೇಂದ್ರ ಸರಕಾರ ಪ್ರಕಟಿಸಿದ ಪದ್ಮಭೂಷಣ ಪ್ರಶಸ್ತಿಯನ್ನು ತಿರಸ್ಕರಿಸಿದ್ದಾರೆ. 'ತುಂಬಾ ತಡವಾಗಿ ಬಂದಿದೆ. ನನ್ನನ್ನು ಮೆಚ್ಚಿಸಲು ಸಾಂಕೇತಿಕವಾಗಿ ಕೊಟ್ಟಂತಿದೆ' ಎಂದು ತಿರಸ್ಕಾರಕ್ಕೆ ಅವರು ನೀಡಿರುವ ಕಾರಣ ಸರಿಯೇ ಇರಬಹುದು. 'ಪ್ರಶಸ್ತಿಯ ವಿಷಯದಲ್ಲಿ ದಕ್ಷಿಣದವರಿಗೆ ಸದಾ ತಾರತಮ್ಯ ಮಾಡಲಾಗುತ್ತದೆ' ಎನ್ನುವ ಅವರ ಆಕ್ಷೇಪವಂತೂ ನಿಜವೇ. ಆದರೆ 'ಭಾರತ ರತ್ನ ಕೊಡಬೇಕಿದ್ದ ಸಮಯದಲ್ಲಿ ಪದ್ಮಭೂಷಣ ಕೊಟ್ಟಿರುವುದು ಎಷ್ಟು ಸರಿ..?' ಎಂಬ ಅವರ ಮಗನ ಟೀಕೆ 'ಸ್ವಲ್ಪ ಅತಿಯಾಯಿತು' ಎನ್ನಲಡ್ಡಿಯಿಲ್ಲ.

ಹಾಗೆಂದು ಹಿನ್ನೆಲೆ ಸಂಗೀತಕ್ಕೆ ಜಾನಕಿಯಮ್ಮನ ಅಮೂಲ್ಯ ಕೊಡುಗೆಯನ್ನು ಯಾರೂ ನಿರಾಕರಿಸಲಾಗದು. ದಕ್ಷಿಣ ಭಾರತದ ಎಲ್ಲ ಭಾಷೆಗಳ ಸಿನಿಮಾಗಳಲ್ಲಿ ಮಾತ್ರವಲ್ಲ ಸಿಂಹಳಿ, ಒರಿಯಾ, ಬಂಗಾಳಿ, ಇಂಗ್ಲಿಷ್, ಸಂಸ್ಕೃತ, ಜಪಾನಿ, ಜರ್ಮನಿ ಭಾಷೆಗಳಲ್ಲೂ ಅವರು ಹಾಡಿದ್ದಾರೆ! ಐದು ದಶಕಗಳಲ್ಲಿ 20 ಸಾವಿರಕ್ಕೂ ಹೆಚ್ಚು ಹಾಡುಗಳನ್ನು ಹಾಡಿರುವ ಅವರನ್ನು 75ರ ಇಳಿವಯಸ್ಸಿನಲ್ಲಿ (ಬರ್ತ್‌ಡೇ 23/4/1938) ಪದ್ಮಪ್ರಶಸ್ತಿಗೆ ಗುರುತಿಸಿರುವುದು ಆಯ್ಕೆ ಮಾಡುವವರ ಮೆಳ್ಳೆಗಣ್ಣಿಗೆ ಸಾಕ್ಷಿ.

ಎಸ್‌ಪಿ ಬಾಲಸುಬ್ರಹ್ಮಣ್ಯಂ ಮತ್ತು ಸಂಗೀತ ನಿರ್ದೇಶಕ ಇಳೆಯರಾಜ ಜತೆಗೆ ಜಾನಕಿ ಅವರದ್ದು 80-90 ರ ದಶಕದ ಅದ್ಭುತ ತ್ರಿವಳಿ ಕೂಟ. ಈ ಮೂವರು ಒಟ್ಟು ಸೇರಿದ ಹಾಡುಗಳೆಲ್ಲವೂ ಸೂಪರ್‌ಹಿಟ್ ಆಗಿವೆ. ಕನ್ನಡದಲ್ಲಿ ಜಿ.ಕೆ. ವೆಂಕಟೇಶರಿಂದ ಹಿಡಿದು ಹಂಸಲೇಖಾವರೆಗೆ ಎಲ್ಲ ಪ್ರಮುಖ ಸಂಗೀತ ನಿರ್ದೇಶಕರ ಸಿನಿಮಾಗಳಲ್ಲಿ ಜಾನಕಿ ಹಾಡಿದ್ದಾರೆ. ಹಿಂದಿಯಲ್ಲಿ ಜೈದೇವ್‌ರಿಂದ ಹಿಡಿದು ಅನ್ನು ಮಲಿಕ್‌ವರೆಗೆ ಬಹುತೇಕ ಸಂಗೀತ ನಿರ್ದೇಶಕರ ಜತೆಗೆ ಕೆಲಸ ಮಾಡಿದ್ದಾರೆ. ಹಿಂದಿಯಲ್ಲಿ ಮೊಹ್ಮದ್ ರಫಿ, ಕಿಶೋರ್ ಕುಮಾರ್‌ರಿಂದ ಹಿಡಿದ ಶಂಕರ್ ಮಹಾದೇವನ್‌ವರೆಗೆ ಎಲ್ಲ ಗಾಯಕರೂ ಇವರ ಜತೆಗೆ ಹಾಡಿದ್ದಾರೆ. ಒಂದು ಕಾಲದಲ್ಲಿ ಕನ್ನಡದಲ್ಲಿ ಒಂದೆಡೆ 'ಪಿ.ಸುಶೀಲ–ಪಿ.ಬಿ.ಶ್ರೀನಿವಾಸ್' ಜೋಡಿ ಸೂಪರ್‌ಹಿಟ್ ಎನ್ನಿಸಿದರೆ, ಇನ್ನೊಂದೆಡೆ 'ಜಾನಕಿ–ಎಸ್ಪಿ' ಜೋಡಿ ದಾಖಲೆ ನಿರ್ಮಿಸುತ್ತಾ ನಡೆದರು.

ಸಿನಿಮಾ ಹಿನ್ನೆಲೆ ಗಾಯನದಲ್ಲಿ ಧ್ವನಿ ವೈವಿಧ್ಯ ಮತ್ತು ಏರಿಳಿತಗಳಿಗೆ ಹೆಸರುವಾಸಿಯಾಗಿರುವ ಜಾನಕಿಯಮ್ಮ, 90ರ ದಶಕದ ಬಳಿಕ ಹಾಡಿರುವ ಭಕ್ತಿಗೀತೆಗಳ ಮೂಲಕವೂ ಸಹಸ್ರಾರು ಅಭಿಮಾನಿಗಳನ್ನು ಹೊಂದಿದ್ದಾರೆ. ಈಗಾಗಲೆ 4 ಸಲ ರಾಷ್ಟ್ರೀಯ ಪ್ರಶಸ್ತಿ ಹಾಗೂ 31 ಸಲ ವಿವಿಧ ರಾಜ್ಯಗಳಲ್ಲಿ ರಾಜ್ಯ ಪ್ರಶಸ್ತಿ ಗೆದ್ದುಕೊಂಡಿರುವ 'ಕಲೈಮಾಮಣಿ' ವಿಜೇತೆ ಜಾನಕಿಯಮ್ಮನಿಗೆ ಪ್ರಶಸ್ತಿಗಳ ಬರ ಖಂಡಿತಾ ಇಲ್ಲ.

## ಜೋಲಿಯ ಆಸೆ!



ಹಾಲಿವುಡ್ ನಟಿ, ನಿರ್ದೇಶಕಿ ಆಂಜೆಲಿನಾ ಜೋಲಿ ತನ್ನ ಏಳನೇ ಮಗುವಿಗೆ ತಾಯಿಯಾಗಲು ಹೊರಟಿದ್ದಾಳಂತೆ. 'ಆಕೆಯೀಗ ಮೂರು ತಿಂಗಳ ಗರ್ಭಿಣಿ' ಎನ್ನುತ್ತಿದೆ ಅಮೆರಿಕದ ಸ್ಟಾರ್ ಮ್ಯಾಗಸಿನ್ ವರದಿ. ಮಾಧ್ಯಮದ ಜತೆ ಮಾತನಾಡುತ್ತಾ ಕೆಲವು ವಾರಗಳ ಹಿಂದೆ ಸ್ವತಃ ಜೋಲಿ, 'ಮಕ್ಕಳೆಂದರೆ ನನಗೆ ತುಂಬ ಇಷ್ಟ. ಏಳನೇ ಮಗುವನ್ನು ನಿರೀಕ್ಷೆ ಮಾಡುವುದರಲ್ಲಿ ತಪ್ಪೇನಿದೆ?' ಎಂದು ಪ್ರಶ್ನಿಸಿದ್ದಳು. ನಮ್ಮಲ್ಲಿ ಬಾಲಿವುಡ್ ತಾರೆಯರು ಒಂದು ಮಗು ಹೆತ್ತದ್ದನ್ನೇ ದೊಡ್ಡ ಸುದ್ದಿಯೆಂಬಂತೆ ಬಿಂಬಿಸುತ್ತಾ, ಇನ್ನೊಂದು ಮಗು ಹೆತ್ತರೆ ಸೌಂದರ್ಯ ಕೆಡುತ್ತದೆಂಬ ಆತಂಕದಲ್ಲಿರುವಾಗ ಜೋಲಿಯ ಈ ಹೇಳಿಕೆ ಅಭಿಮಾನಿಗಳಲ್ಲಿ ಥ್ರಿಲ್ ಹುಟ್ಟಿಸಿದೆ. ಇರುವ ಆರು ಮಕ್ಕಳಲ್ಲಿ ಮೂರು ಮಾತ್ರ ಜೋಲಿ ಹೆತ್ತದ್ದು; ಉಳಿದ ಮೂರು ದತ್ತು ಪಡೆದದ್ದು. ಹಾಗಿದ್ದೂ ಆಕೆಯ ಮಕ್ಕಳನ್ನು ಪಡೆವ ಆಸೆ ಕುಗ್ಗಿಲ್ಲವಂತೆ. ಹಿಂದೊಮ್ಮೆ ಸಂದರ್ಶನದಲ್ಲಿ 'ಒಂದು ಡಜನ್ ಮಕ್ಕಳಾದರೂ ಇರಬೇಕು..' ಎಂದಾಕೆ ಹೇಳಿದ್ದು ಸುದ್ದಿಯಾಗಿತ್ತು.

ಜೋಲಿಯ ವಿಶೇಷವೆಂದರೆ ಇವತ್ತಿಗೂ 'ಜಗತ್ತಿನ ಅತ್ಯಂತ ಸೆಕ್ಸೀ ಮಹಿಳೆ' ಎಂಬ ಅಭಿದಾನವನ್ನು ಮಾಧ್ಯಮಗಳಿಂದ ಪಡೆಯುತ್ತಿರುವುದು. 38ರ ಹರೆಯದ ಜೋಲಿ (ಬರ್ತ್‌ಡೇ 4/6/1975) ನಟನೆಯಲ್ಲೂ ಎತ್ತಿದ ಕೈ. ಈಗಾಗಲೆ ನಟನೆಗಾಗಿ ಒಮ್ಮೆ ಆಸ್ಕರ್ ಹಾಗೂ ಮೂರು ಸಲ ಗೋಲ್ಡನ್ ಗ್ಲೋಬ್ ಪ್ರಶಸ್ತಿ ಗೆದ್ದುಕೊಂಡಿರುವ ಜೋಲಿ, 2009 ಮತ್ತು 11ರಲ್ಲಿ 'ಹಾಲಿವುಡ್‌ನ ಅತ್ಯಧಿಕ ಸಂಭಾವನೆ ಪಡೆಯುವ ನಟಿ' ಎಂದು ದಾಖಲೆ ನಿರ್ಮಿಸಿದ್ದಾಳೆ. 2001ರಲ್ಲಿಯೇ 'ಟಾಂಬ್ ರೈಡರ್' ಸಿನಿಮಾದ ಮೂಲಕ ಸುದ್ದಿ ಶೃಂಗಕ್ಕೇರಿದ ಈಕೆ, 'ದಿ ಕ್ರಾಡಲ್ ಆಫ್ ಲೈಫ್' ಚಿತ್ರದ ವೇಳೆಗೆ ಅತ್ಯಧಿಕ ಸಂಭಾವನೆ ಪಡೆದವಳು. ಜಾನ್ ಲೀ ಮಿಲ್ಲರ್ ಮತ್ತು ಬಿಲ್ಲೀ ಥಾರ್ಟನ್ ಇಬ್ಬರಿಗೂ ಸೋಡಾಚೀಟಿ ಕೊಟ್ಟ ಬಳಿಕ ಈಗ ನಟ ಬ್ರಾಡ್ ಪಿಟ್ ಜತೆ ಸಹಜೀವನ ನಡೆಸುತ್ತಿದ್ದಾಳೆ. ಮುಂದಿನ ಮೇನಲ್ಲಿ ಇವರಿಬ್ಬರ ಮದುವೆ ನಡೆಯಲಿದೆ ಎಂಬ ಸುದ್ದಿಯೂ ಇದೆ. ಈಗಿನ ಸುದ್ದಿಯನ್ನು ನಂಬುವುದೇ ಆದರೆ, ಆರು ತಿಂಗಳ ಗರ್ಭಿಣಿಯಾಗಿಯೇ ಈಕೆ ಚರ್ಚ್‌ನಲ್ಲಿ 'ಐ ಡೂ' ಎನ್ನಬಹುದು!

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65